**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ:11-02-2026:**

**ಮುಂದುವರೆದ ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ಅಭಿಯೋಜಕರಿಂದಃ**

ಎಂ.ಒ.4ನ್ನು ತೆರೆದ ನ್ಯಾಯಾಲಯದಲ್ಲಿ ಪ್ಲೇ ಮಾಡಿ ತೋರಿಸಲಾಯಿತು. ಆರೋಪಿತರು ಮತ್ತು ಅವರ ಪರ ವಕೀಲರು ಹಾಜರಿರುತ್ತಾರೆ.

2.ಅದರಲ್ಲಿ ಕಂಡುಬರುವ ಚಿತ್ರಣ ಮಡಬಲು ಗ್ರಾಮಪಂಚಾಯಿತಿಯ ಕಛೇರಿಯ ಚಿತ್ರಣವಾಗಿರುತ್ತದೆ. (ನ್ಯಾಯಾಲಯವು ಅದನ್ನು ವೀಕ್ಷಿಸಿದಾಗ ಅದರಲ್ಲಿ ನ್ಯಾಯಾಲಯದ ಮುಂದಿರುವ ಆರೋಪಿಯು ಕತ್ತಿ ಹಿಡಿದುಕೊಂಡು ಬಂದು ಸದರಿ ಕಛೇರಿಯಲ್ಲಿ ಕೆಲಸ ಮಾಡುತ್ತಿರುವ ನೌಕರರ ಮೇಲೆ ಹಲ್ಲೆ ಮಾಡಲು ಕತ್ತಿ ಬೀಸುತ್ತಿರುವುದು ಮತ್ತು ಅಲ್ಲಿದ್ದ ಇತರ ಜನರು, ಸಿಬ್ಬಂದಿಗಳು ಆ ವ್ಯಕ್ತಿಯನ್ನು ಹಿಡಿದುಕೊಂಡಿರುವುದು ಕಂಡುಬಂದಿರುತ್ತದೆ. ಈ ವೀಡಿಯೋದಲ್ಲಿ ದಿನಾಂಕ 1-9-2020 ಸಮಯ 16-52 ಎಂದು ಕಂಡುಬರುತ್ತಿದೆ.) ನಿಪಿ-19 ಮತ್ತು 20 ಅದಕ್ಕೆ ಸಂಬಂಧಪಟ್ಟ ಫೋಟೋಗಳಾಗಿರುತ್ತದೆ.

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ**

ನಿಪಿ-24ರ ಸಿಡಿಯನ್ನು ನಾನು ಮಾಡಿಲ್ಲ. ನಾನು ಮಾಡಿರುವ ಸಿಡಿ ನ್ಯಾಯಾಲಯದ ಮುಂದೆ ಇಲ್ಲ. ಅದು ಠಾಣೆಯ ಸಿಡಿ ಕಡತದಲ್ಲಿ ಇರುವುದಿಲ್ಲ. ನಿಪಿ-19 ಮತ್ತು 20 ರ ಫೋಟೋದಲ್ಲಿ ನಾನು ಇದ್ದೇನೆ. ಅದನ್ನು ಠಾಣಾ ಕ್ಯಾಮೆರಾ ಮೂಲಕ ತೆಗೆಸಿರುತ್ತೇನೆ. ಈ ಫೋಟೋಗಳ ಸಿಡಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಹಾಜರುಪಡಿಸಲು ತೊಂದರೆ ಇರಲಿಲ್ಲ.

2.ಎಂ.ಒ.4 ಮಡಬಲು ಗ್ರಾಮಪಂಚಾಯಿತಿಗೆ ಸಂಬಂಧಪಟ್ಟದ್ದು ಎನ್ನುವ ಬಗ್ಗೆ ಏನು ದಾಖಲೆ ಇದೆ ಎಂದರೆ ಸಾಕ್ಷಿಯು ಸದರಿ ಗ್ರಾಮ ಪಂಚಾಯಿತಿಯ ಪಿಡಿಒರವರು ಹಾಜರುಪಡಿಸಿದ್ದನ್ನು ವಶಪಡಿಸಿಕೊಂಡಿರುತ್ತೇನೆ ಎನ್ನುತ್ತಾರೆ. ಅದು ಆ ಇಲಾಖೆಗೆ ಸಂಬಂಧಪಟ್ಟದ್ದು ಎನ್ನುವ ಬಗ್ಗೆನಾನು ದಾಖಲೆ ಪಡೆದುಕೊಂಡಿಲ್ಲ. ಮುದ್ದೆಮಾಲು 4ನ್ನು ನಾನೇ ಮಹಜರು ಮುಖೇನ

ವಶಪಡಿಸಿಕೊಂಡಿರುತ್ತೇನೆ. ಮಹಜರ್ ಕಾಲದಲ್ಲಿ ನಾನು ಅದು ಆ ಇಲಾಖೆಗೆ ಸಂಬಂಧಪಟ್ಟದ್ದು ಎನ್ನುವ ಬಗ್ಗೆ ನಾನು ಯಾವುದೇ ದಾಖಲೆ ಪಡೆದುಕೊಂಡಿಲ್ಲ. ದಿಃ24-12-20ರಂದು ನಾನು ಎಂ.ಒ.4ನ್ನು ವಶಪಡಿಸಿಕೊಂಡೆ ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ಆ ಸಮಯದಲ್ಲಿ ಚಾಸಾ-1 ರಿಂದ 3 ರವರ ಪಂಚರಾಗಿ ಹಾಜರಾಗಿದ್ದರು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ಎಂ.ಒ.4 ನ್ನು ಕೇಸಿಗೋಸ್ಕರ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ಯಾವುದೇ ಚಿತ್ರಣ 2 ತಿಂಗಳುಗಳ ನಂತರ ಸಿಸಿಕ್ಯಾಮೆರಾದಲ್ಲಿ ಉಳಿಯುವುದಿಲ್ಲ, ಅದನ್ನು ಸೃಷ್ಟಿಸಿಕೊಂಡದ್ದು ಎಂದರೆ ಸರಿಯಲ್ಲ. ಚಾಸಾ-1 ರವರು ನೀಡಿದ ಸುಳ್ಳು ದೂರಿನ ಮೇರೆಗೆ ಸುಳ್ಳು ಮಹಜರನ್ನು ಸೃಷ್ಟಿಸಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ ಎಂ.ಒ.4 ರ ದೃಶ್ಯಾವಳಿಗೂ ಆರೋಪಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,**

**ಹಾಸನ.**